ಇಂದು ದಿಃ **27.10.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಎಸ್ ಶಿಂಧೆ ವಕೀಲರಿಂದ</u>

1. ದಿಃ 21.05.2018 ರಂದು ತನಿಖಾಧಿಕಾರಿಗಳು ಈ ಪ್ರಕರಣಕ್ಕೆ ಸಂಬಂದಿಸಿದಂತೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಿನ ಹೇಳಿಕೆ ಪಡೆದುಕೊಂಡಿದ್ದನ್ನು ಬಿಟ್ಟು ಬೇರೆ ಯಾವುದೇ ದಿನ ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಸದರಿ ನಮ್ಮ ತರಬೇತಿ ಶಾಲೆಯ ಮುಖ್ಯಸ್ಥರಾಗಿ ಪೋಲಿಸ ವರಿಷ್ಟಾಧಿಕಾರಿಗಳು ಧಾರವಾಡ ರವರಾದ ಶ್ರೀಮತಿ ಸಂಗೀತಾ ರವರು ಇದ್ದರು. ಸದರಿ ಮುಖ್ಯಸ್ಥರ ಕಚೇರಿ ಹಾಗೂ ನಮ್ಮ ತರಬೇತಿ ಶಾಲೆ ಒಂದೇ ಆವರಣದಲ್ಲಿ ಇವೆ ಎಂದರೆ ಸರಿ. ಸದರಿ ತರಬೇತಿ ಶಾಲೆಯಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಸಂಬಂದಿಸಿದಂತೆ ಅಳಲು ಇದ್ದರೇ ಅದನ್ನು ಎ ಡಿ ಐ ರವರ ಗಮನಕ್ಕೆ ತರುತ್ತಿದ್ದೆವು ಸದರಿಯವರು ಅವರ ಮೇಲಾಧಿಕಾರಿಗಳ ಗಮನಕ್ಕೆ ತರುತ್ತಿದ್ದರು.

2. ಸದರಿ ಪೋಲಿಸ ವರಿಷ್ಟಾಧಿಕಾರಿಗಳಾದ ಶ್ರೀಮತಿ ಸಂಗೀತಾ ರವರ ಕಚೇರಿಯ ಫೊನ ನಂಬರ ಹಾಗೂ ಅವರ ವೈಯಕ್ತಿಕ ನಂಬರ ನನಗೆ ಗೊತ್ತು ಇರಲಿಲ್ಲ. ಸದರಿ ಅನಾಮಧೇಯ ಕರೆ ನನಗೆ ಒಂದೇ ಬಾರಿ ಬಂದಿತ್ತು ಅದನ್ನು ನಾನು ಸ್ವೀಕರಿಸಲಿಲ್ಲ. ಮತ್ತೆ ಸದರಿ ನಂಬರನಿಂದ ನನಗೆ ಮತ್ತೆ ಯಾವತ್ತು ಕರೆ ಬಂದಿರಲಿಲ್ಲ. ಅದಲ್ಲದೇ ಬೇರೆ ಯಾವುದೇ ನಂಬರನಿಂದ ನನಗೆ ಹಣ ಕೇಳಿ ಯಾವುದೇ ಕರೆ ಬಂದಿರಲಿಲ್ಲ. ದಿಃ 18.05.2018 ರಂದು ಸಂಜೆ ಸಮಯದಲ್ಲಿ ಚಾಸಾ1, 6, 8 ಮತ್ತು 9 ರವರು ಸದರಿ ರೋಗಿಗೆ ಸಹಾಯ ಮಾಡಲು ಪರಿಕ್ಷಾರ್ಥಿಗಳಿಂದ ತಲಾ ರೂ.2,000/- ಹಣ ಸಂಗ್ರಹಿಸುತ್ತಾರೆ ಎಂದು ನನಗೆ ತಿಳಿಸಿದ್ದರು. ಸದರಿ ವಿಷಯವನ್ನು ನಾನು ಸದರಿ ತರಬೇತಿ ಶಾಲೆಯಲ್ಲಿನ ನನ್ನ ಹಿರಿಯ ಅಧಿಕಾರಿಗಳಿಗೆ ತಿಳಿಸಲಿಲ್ಲ. ಸದರಿ ಅನಾಮಧೇಯ

ನಂಬರನಿಂದ ನನಗೆ ಕರೆ ಬಂದ ನಂಬರಗೆ ನಾನು ತಿರುಗಿ ಕಾಲ್ ಮಾಡಿ ಸದರಿಯವರು ಯಾರು ಎಂದು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಆ ಬಗ್ಗೆ ನಾನಾಗಲೀ ಅಥವಾ ಚಾಸಾ1, 6, 8 ಮತ್ತು 9 ರವರಾಗಲೀ ನಮ್ಮ ಹಿರಿಯ ಅಧಿಕಾರಿಗಳಿಗೆ ಲಿಖಿತವಾಗಿ ಸದರಿ ಕರೆ ಬಂದ ಬಗ್ಗೆ ತಿಳಿಸಲಿಲ್ಲ. ಹಾಗೂ ಸದರಿ ಹಣ ನೀಡದಿದ್ದರೇ ತರಬೇತಿ ಪಡೆಯುತ್ತಿದ್ದವರಿಗೆ ತೊಂದರೆ ನೀಡುವಂತೇ ಸೂಚಿಸಿ ಬೆದರಿಕೆ ಹಾಕಿರುತ್ತಾರೆ ಎಂಬ ಮಾಹಿತಿಯನ್ನು ಸಹ ನಾವು ನಮ್ಮ ಮೇಲಾಧಿಕಾರಿಗಳಿಗೆ ಲಿಖಿತವಾಗಿ ತಿಳಿಸಲಿಲ್ಲ.

3. ಸದರಿ ರೋಗಿಯ ಮಾಹಿತಿಯನ್ನು ಪಡೆದುಕೊಳ್ಳುವ ಪ್ರಯತ್ನವನ್ನು ನಾವು ಮಾಡಲಿಲ್ಲ. ಸದರಿ ಮಾಹಿತಿಯ ಆಧಾರದ ಮೇಲೆ ನಾನು ಪೋಲಿಸ ಠಾಣೆಗೆ ಹೊಗಿ ದೂರನ್ನು ದಾಖಲಿಸಲು ಪ್ರಯತ್ನಿಸಲಿಲ್ಲ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಚಾಸಾ1,6,8 ಮತ್ತು 9 ರವರು ಹೇಳಿದ್ದಾರೆಂದು ಹೇಳಿದ ಆಧಾರದ ಮೇಲೆ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ಕರೆ ಆಧಾರದ ಮೇಲೆ ಪರಿಕ್ಷಾರ್ಥಿಗಳಿಂದ ತಲಾ ರೂ.2,000/- ಗಳನ್ನು ಯಾರು ಸಂಗ್ರಹಿಸಲಿಲ್ಲ.

4. ಚಾಸಾ1 ರವರು ದೂರನ್ನು ದಿಃ 21.05.2018 ರಂದು ದಾಖಲಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 1 ಮತ್ತು 4 ನೇ ಆರೋಪಿತರ ಹೆಸರು ನನಗೆ ಗೊತ್ತು ಆದರೇ ಸದರಿಯವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರ ಬಗ್ಗೆ ಪೋಲಿಸ ಠಾಣೆಯಲ್ಲಿ ಪೋಲಿಸರು ನನಗೆ ಹೇಳಿದ ಮೇರೇಗೆ ಅವರ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಅವರ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿ. ಸದರಿ ನನಗೆ ಬಂದ ಕರೆ ಆಧಾರದ ಮೇಲೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ. 3 ನೇ ಆರೋಪಿಯಾದ ಗಿರಿಜವ್ವ ರವರ ಹೆಸರಿನಲ್ಲಿ ಸಿಮ್ ಖರೀದಿಸಲಾಗಿತ್ತು ಎಂದು ಪೋಲಿಸರು ನನಗೆ ಹೇಳಿದ ಮೇರೆಗೆ

ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ ಸಿಮ್ ನ್ನು 1 ನೇ ಆರೋಪಿ ಬಳಸಿ ಪ್ರತಿ ಶಿಬಿರಾರ್ಥಿಗಳಿಂದ ಹಣ ಪಡೆಯಲು ಉಪಯೋಗಿಸಿದ್ದ ಎಂದು ಪೋಲಿಸರು ಹೇಳಿದ ಮೇರೆಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಪೋಲಿಸರು ನನ್ನ ಮೊಬೈಲನ್ನು ನನ್ನ ಸಮಕ್ಷಮ ಪರಿಶೀಲಿಸಿಲ್ಲ.

5. ದಿಃ 18.05.2018 ರಂದು ನನಗೆ ಕರೆ ಬಂದ ವಿಚಾರವನ್ನು ತನಿಖಾಧಿಕಾರಿಗೆ ಹೇಳಿ ನನ್ನ ಮೊಬೈಲನ್ನು ಅವರಿಗೆ ತೋರಿಸಿಲ್ಲ ಎಂದರೆ ಸರಿ. ಯಾವ ನಂಬರಿಂದ ನನಗೆ ಕರೆ ಬಂದಿತ್ತು ಸದರಿ ಮೊಬೈಲನ್ನು ಪೋಲಿಸರು ನನಗೆ ತನಿಖೆ ಸಮಯದಲ್ಲಿ ತೊರಿಸಿಲ್ಲ. ಪೋಲಿಸರು ನನಗೆ ವೈಸ ರೆಕಾರ್ಡಿಂಗ ಚಾಲನೆ ಮಾಡಿ ತೊರಿಸಿಲ್ಲ. ಸದರಿ 9731155194 ಮೊಬೈಲ ನಂಬರ ನನ್ನದಲ್ಲ ಎಂದರೆ ಸರಿಯಲ್ಲ. ಸದರಿ ಮೊಬೈಲ ನಂಬರ ನನಗೇ ಸೇರಿದ್ದು ಎಂದು ತೊರಿಸಲು ನಾನು ತನಿಖಾದಿಕಾರಿಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಂಗತಿಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ತನಿಖಾಧಿಕಾರಿ ನನ್ನ ಮೇಲಾಧಿಕಾರಿ ಆದ್ದರಿಂದ ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.